**ದಿನಾಂಕಃ 21-03-2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ 1 ರಿಂದ 4 ರ ಪರ ಶ್ರೀ ಎಸ್ ಆರ್ ಎಸ್ ವಕೀಲರಿಂದಃ**

ವಾದಿಯ ಅಳಿಯ ಮಧುಸೂದನ್ ಇವರು ನನಗೆ ತಮ್ಮನಾಗಬೇಕಾಗಿದ್ದು ಆ ಕಾರಣದಿಂದ ವಾದಿ ನನಗೆ ಸಂಬಂಧಿಕರಿರುತ್ತಾರೆ. ವಾದಿ ಕರಾರು ಪತ್ರ ಮಾಡಿಕೊಡುವ ಕಾಲಕ್ಕೆ ಶಿವಮೊಗ್ಗದ ಹೊಸೂರು ಗ್ರಾಮದಲ್ಲಿ ವಾಸ ಇದ್ದರು. ವಾದಿ ನನಗೆ ಮುಕ್ತನಾರ್ಮೆ ಪತ್ರ ಬರೆದುಕೊಡುವ ಕಾಲಕ್ಕೆ ಅವರು ತಂಗಿಯ ಮನೆಯಾದ ಟಾಟಾ ಸಿಲ್ಕ್ ಪಾರ್ಮ್ ಬಸವನಗುಡಿ ಬಳಿ ವಾಸ ಇದ್ದರು. ವಾದಿ ನನಗೆ ಬರೆದುಕೊಟ್ಟ ಮುಕ್ತನಾರ್ಮೆ ಪತ್ರದಲ್ಲಿ ಅವರು ಯಾವ ವಿಳಾಸದಲ್ಲಿ ವಾಸ ಇದ್ದರು ಎಂಬ ಬಗ್ಗೆ ಸದರಿ ದಾಖಲೆಯನ್ನು ನೋಡಿ ಹೇಳಬೇಕು. ವಾದಿ ನನಗೆ ಮುಕ್ತನಾರ್ಮೆ ಪತ್ರ ಬರೆದುಕೊಡುವ ಕಾಲಕ್ಕೆ ಅವರು ಟ್ರಸ್ಟ್ ವೆಲ್ ಆಸ್ಪತ್ರೆಯಲ್ಲಿ ಆಗಲೇ ಚಿಕಿತ್ಸೆ ಪಡೆದು ತನ್ನ ತಂಗಿ ಮನೆಯಲ್ಲಿ ವಾಸ ಇದ್ದರು.

2. ಮುಕ್ತನಾರ್ಮೆ ಪತ್ರ ನೋಂದಾಯಿತ ಪತ್ರ ಇರುವುದಿಲ್ಲ ಎಂದರೆ ಸರಿ. ವಾದಿ ಆಪರೇಷನ್ ಆದ ನಂತರ ಅವರು ಓಡಾಡುವ ಸ್ಥಿತಿಯಲ್ಲಿ ಇರಲಿಲ್ಲ ಎಂದರೆ ಸಾಕ್ಷಿ ಅವರು ಮನೆಯ ಒಳಗೆ ಓಡಾಡುವ ಸ್ಥಿತಿಯಲ್ಲಿ ಇದ್ದರು ಎಂದು ಉತ್ತರಿಸುತ್ತಾರೆ. ಮುಕ್ತನಾರ್ಮೆ ಪತ್ರ ನೋಟರಿ ಆಗುವ ಕಾಲಕ್ಕೆ ವಾದಿ ನೋಟರಿಯವರ ಬಳಿ ಬಂದಿರಲಿಲ್ಲ ಎಂದರೆ ಸರಿಯಲ್ಲ. ಮುಕ್ತನಾರ್ಮೆ ಪತ್ರವನ್ನು ಯಾವ ನೋಟರೀಯವರ ಮುಂದೆ ಮಾಡಿಕೊಡಲಾಗಿರುತ್ತದೆ ಎಂದರೆ ಸಾಕ್ಷಿ ಅವರ ಹೆಸರು ನನಗೆ ಗೊತ್ತಿರುವುದಿಲ್ಲ ಆದರೆ ಜಯನಗರದ ಸಬ್ ರಿಜಿಸ್ಟ್ರಾರ್ ಕಛೇರಿ ಬಳಿ ಅವರ ಕಛೇರಿ ಇತ್ತು ಎಂದು ಉತ್ತರಿಸುತ್ತಾರೆ. ಮುಕ್ತನಾರ್ಮೆ ಪತ್ರವನ್ನು ಬರೆದ ದಿನವೆ ನೋಟರಿ ಮಾಡಿಸಲಾಗಿರುತ್ತದೆ. ಮುಕ್ತನಾರ್ಮೆಯನ್ನು ಸಾಕ್ಷಿಗಳ ಸಮಕ್ಷಮ ಮಾಡಲಾಗಿ ಆದರೆ ಅವರ ಹೆಸರು ನನಗೆ ಈಗ ಜ್ಞಾಪಕ ಬರುತ್ತಿಲ್ಲ. ಸದರಿ ಮುಕ್ತನಾರ್ಮೆ ಪತ್ರಕ್ಕೆ ಎಷ್ಟು ಜನ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ನನಗೆ ಜ್ಞಾಪಕ ಇರುವುದಿಲ್ಲ. ಸದರಿ ಸಾಕ್ಷಿದಾರರು ನಿಮ್ಮ ಅಥವಾ ವಾದಿಯ ಕಡೆಯವರ ಎಂದರೆ ಸಾಕ್ಷಿ ನನಗೆ ಅಷ್ಟಾಗಿ ಜ್ಞಾಪಕ ಆಗುತ್ತಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ಸಾಕ್ಷಿದಾರರನ್ನು ಎಲ್ಲಿಂದ ಕರೆದುಕೊಂಡು ಬಂದಿರುತ್ತಾರೆ ಎಂದು ನನಗೆ ಈಗ ಗೊತ್ತಿರುವುದಿಲ್ಲ. ಮುಕ್ತನಾರ್ಮೆ ಪತ್ರದ ಸಾಕ್ಷಿದಾರರ ಸದರಿ ಪತ್ರವನ್ನು ಓದಿರಬಹುದು

ಆದರೆ ನನಗೆ ಅಷ್ಟಾಗಿ ನೆನಪಿರುವುದಿಲ್ಲ. ಪ್ರತಿವಾದಿ 1 ರಿಂದ 3, 5 ಮತ್ತು 6 ರವರು ವಾದಿಗೆ ಬರೆದುಕೊಟ್ಟ ಎನ್ನಲಾದ ಕರಾರು ಪತ್ರದ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ ಆದರೆ ನಂತರ ನಾನು ಅದನ್ನು ಓದಿರುತ್ತೇನೆ ಎಂದು ಉತ್ತರಿಸುತ್ತಾರೆ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-xxx
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ